ಆ) ಅಂಗನವಾಡಿಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಮಂಜೂರಾದ ಅನುದಾನ ಮತ್ತು ವೆಚ್ಚದ ವಿವರ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

ಯೋಜನೆ	ಮಂಜೂರಾದ ಅನುದಾನ	ವೆಚ್ಚ
ಆರ್.ಐ.ಡಿ.ಎಫ್ (2007–08 ರಿಂದ 2013–14ವರೆಗೆ)	1191.53	282.05
ವಿಶೇಷ ಅಭಿವೃದ್ಧಿ ಯೋಜನೆ (2008–09 ರಿಂದ 2014–15ವರೆಗೆ)	1165.44	546.20
ಎಂ.ಎನ್.ಡಿ.ಪಿ (2009–10 ರಿಂದ 2010–11)	303.00	214.66
ಒಟ್ಟು	**2659.97**	**1042.91**

ಇ) ಹೌದು

ಈ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:26.12.2014ರಂದು ಜರುಗಿದ ಸಭೆಯಲ್ಲಿ ಹೊಸ ಕಟ್ಟಡಗಳನ್ನು ಒಳಗೊಂಡಂತೆ ಅಪೂರ್ಣಗೊಂಡಿರುವ ಎಲ್ಲಾ ಅಂಗನವಾಡಿ ಕಟ್ಟಡಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಆಹಾರ ಸಾಮಾಗ್ರಿ ಗುತ್ತಿಗೆಯಲ್ಲಿನ ಅಕ್ರಮ

222(461); ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಬೀದರ್ ಜಿಲ್ಲೆ ಅಂಗನವಾಡಿ ಮಕ್ಕಳಿಗೆ ಆಹಾರ ಸರಬರಾಜು ಮಾಡುವ ಗುತ್ತಿಗೆಯನ್ನು ಇಲ್ಲಿಯವರೆಗೆ ಅಂತಿಮಗೊಳಿಸದೇ ಇರಲು ಕಾರಣವೇನು;

ಆ) ಈ ಹಿಂದಿನ ಗುತ್ತಿಗೆ ಹಾಗೂ ಈಗಿನ ಗುತ್ತಿಗೆಯಲ್ಲಿ ಸಾಕಷ್ಟು ಅಕ್ರಮಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಆಹಾರ ಸರಬರಾಜು ಮಾಡುವ ಗುತ್ತಿಗೆಯಲ್ಲಿ ಜರುಗಿದೆ ಎನ್ನಲಾದ ಅಕ್ರಮಗಳನ್ನು ತನಿಖೆ ಮಾಡಲು ಸರ್ಕಾರ ಸಿ.ಓ.ಡಿಗೆ ವಹಿಸುವುದೇ?

ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಬೀದರ್ ಜಿಲ್ಲೆಯ ಅಂಗನವಾಡಿ ಫಲಾನುಭವಿಗಳಿಗೆ ಎಂ.ಎಸ್. ಪಿ.ಟಿ.ಸಿ.ಗಳ ಮೂಲಕ ಆಹಾರ ಪೂರೈಕೆಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ:06.08.2014ರಂದು ಟೆಂಡರ್ ಕರೆಯಲಾಗಿತ್ತು. ಈ ಟೆಂಡರ್ ಪ್ರಕ್ರಿಯೆಗೆ ಉಚ್ಚ ನ್ಯಾಯಾಲಯ ಗುಲಬರ್ಗಾದಿಂದ ತಡೆ ಆಜ್ಞೆ ಬಂದಿದ್ದು, ಪ್ರಕರಣವು ವಿಚಾರಣೆಯ ಹಂತದಲ್ಲಿರುತ್ತದೆ. ನ್ಯಾಯಾಲಯವು ನೀಡಬಹುದಾದ ಆದೇಶವನ್ನು ಪರಿಶೀಲಿಸಿ ಕ್ರಮ ವಹಿಸಲಾಗುವುದು.

ಆ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಏರ್‌ಪೋರ್ಟ್ ಟರ್ಮಿನಲ್ ಪರಿಸ್ಥಿತಿ

223(462); ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಬೀದರ್ ಜಿಲ್ಲಾ ಕೇಂದ್ರದಲ್ಲಿ ನಿರ್ಮಿಸಿರುವ ಏರ್‌ಪೋರ್ಟ್ ಟರ್ಮಿನಲ್‌ನ ಸದ್ಯದ ಪರಿಸ್ಥಿತಿ ಹೇಗಿದೆ;

ಆ) ಕೇಂದ್ರದ ಕಟ್ಟಡದಲ್ಲಿ ಅನೇಕ ಸಾಮಾಗ್ರಿಗಳು ಕಳುವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ;

ಇ) ಏರ್‌ಪೋರ್ಟ್ ಕೇಂದ್ರವನ್ನು ಬೇರೊಂದು ಸರ್ಕಾರಿ ಇಲಾಖೆಗೆ ಬಳಸಲು ನೀಡುವ ಉದ್ದೇಶ ವರದಿಯಾಗಿರುವುದು ನಿಜವೇ;